ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ
1951ರ ರಾಜ್ಯ ಹಣಕಾಸು ಸಂಸ್ಥೆಗಳ ಕಾಯಿದೆ ಅನ್ವಯ ಸ್ಥಾಪಿತ
KARNATAKA STATE FINANCIAL CORPORATION
Established under the State Financial Corporations' Act, 1951

भारतीय मानक ब्यूरो IS / ISO 9001 : 2008
मानक पथप्रदर्शक
BUREAU OF INDIAN STANDARDS QMS

ಸಂಖ್ಯೆ : ಕ.ರಾ.ಹ.ಸಂ./ಪ್ರ.ಕ./
Ref. No. KSFC/H.O./
DGM[C]/C-3870/2017-18/

ದಿನಾಂಕ :
Date 16-10-2017.

**INTER OFFICE NOTE**

**Sub : Reimbursement of loan processing charges, commitment charges, legal charges to SC/ST Entrepreneurs.**

*In the budget for the Financial Year 2017-18, Government of Karnataka has announced reimbursement of loan processing charges, commitment charges, legal charges to be paid on the term loans availed by SC/ST entrepreneurs for the **first time** from Banks and Financial Institutions. The guidelines for the same was issued vide G.O. No. CI 48 CSC 2017 dated 21-06-2017. The eligibility criteria for the reimbursement is as follows-*

01. *Entrepreneurs belonging to SC/ST should be establishing micro/small scale industry for the first time ;*
02. *Term loan should be availed for establishing a new unit, availing term loans from 01-04-2017 ;*
03. *The proposals for reimbursement of processing charges will be approved by Department of Industries & Commerce and will be released through KSFC as per the seniority list and availability of budgetary provision.*

*Copy of the Government Order is enclosed herewith for reference. You are requested to bring it to the notice of all the eligible borrowers.*

***Executive Director - I***

***All the DGMs /AGMs/BMs of Branch Offices***
***All the DGMs / AGMs of Audit Cells***
***Library***

***The General Managers } for infn.***
***The Executive Director- II}***

PTO

ಪ್ರಧಾನ ಕಛೇರಿ : ಕೆ.ಎಸ್.ಎಫ್.ಸಿ. ಭವನ, ನಂ. 1/1, ತಿಮ್ಮಯ್ಯ ರಸ್ತೆ, ಕಂಟೋನ್‌ಮೆಂಟ್ ರೈಲ್ವೆ ನಿಲ್ದಾಣದ ಹತ್ತಿರ, ಬೆಂಗಳೂರು-560 052
ದೂರವಾಣಿ ಸಂಖ್ಯೆ ಸಾಮಾನ್ಯ : 22263322 ಫ್ಯಾಕ್ಸ್ : 080-22250126 ಇ-ಮೇಲ್ : info@ksfc.in ವೆಬ್ : www.ksfc.in
HEAD OFFICE : KSFC Bhavan, No. 1/1, Thimmaiah Road, Near Cantonment Railway Station, Bengaluru-560 052.
Telephone : Gen : 22263322, Fax : 080-22250126, e-mail : info@ksfc.in Website : www.ksfc.in

ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ
1951ರ ರಾಜ್ಯ ಹಣಕಾಸು ಸಂಸ್ಥೆಗಳ ಕಾಯಿದೆ ಅನ್ವಯ ಸ್ಥಾಪಿತ
KARNATAKA STATE FINANCIAL CORPORATION
Established under the State Financial Corporations' Act, 1951

ಸಂಖ್ಯೆ : ಕ.ರಾ.ಹ.ಸಂ./ಪ್ರ.ಕ./
Ref. No. KSFC/H.O./
DGM[C]/C-3870/2017-18/

ದಿನಾಂಕ :
Date 16-10-2017.

## INTER OFFICE NOTE

**Sub : Reimbursement of loan processing charges, commitment charges, legal charges to SC/ST Entrepreneurs.**

*In the budget for the Financial Year 2017-18, Government of Karnataka has announced reimbursement of loan processing charges, commitment charges, legal charges to be paid on the term loans availed by SC/ST entrepreneurs for the **first time** from Banks and Financial Institutions. The guidelines for the same was issued vide G.O. No. CI 48 CSC 2017 dated 21-06-2017. The eligibility criteria for the reimbursement is as follows-*

01. *Entrepreneurs belonging to SC/ST should be establishing micro/small scale industry for the first time ;*
02. *Term loan should be availed for establishing a new unit, availing term loans from 01-04-2017 ;*
03. *The proposals for reimbursement of processing charges will be approved by Department of Industries & Commerce and will be released through KSFC as per the seniority list and availability of budgetary provision.*

*Copy of the Government Order is enclosed herewith for reference. You are requested to bring it to the notice of all the eligible borrowers.*

**Executive Director - I**

**All the DGMs /AGMs/BMs of Branch Offices**
**All the DGMs / AGMs of Audit Cells**
**Library**

**The General Managers } for infn.**
**The Executive Director- II}**

PTO

ಪ್ರತಿಷ್ಠಿತ ಬಿಸಿನೆಸ್ ಪೀಡಿ

ಕರ್ನಾಟಕ ಸರ್ಕಾರ

ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ

**ಸಂಖ್ಯೆ:**ಕೈವಾಇ/ಜಿಕೈಕೇ/ಸಿ2/ವಿಘಯೋ/ಗಿಉಯೋ/ 2017–18

ಕೈಗಾರಿಕೆ ಮತ್ತು ವಾಣಿಜ್ಯ ನಿರ್ದೇಶನಾಲಯ,
ನಂ.49, ಖನಿಜ ಭವನ, ದೇವರಾಜ್‌ಅರಸ್ ರಸ್ತೆ,
ಬೆಂಗಳೂರು–1, ದಿನಾಂಕ: 16–08–2017.

21 AUG 2017

ಗೆ,
ವ್ಯವಸ್ಥಾಪಕ ನಿರ್ದೇಶಕರು,
ಕೆ.ಎಸ್.ಎಫ್.ಸಿ., ತಿಮ್ಮಯ್ಯ ರಸ್ತೆ,
ಬೆಂಗಳೂರು–560 052.

ಕ. ರಾ. ಹ. ಸಂ.
ಕಾ. ನಿ. ನಿ.- I ರವರ ಕಛೇರಿ
ಸಂಖ್ಯೆ 449 ದಿ: 28/8/17

KARNATAKA STATE FINANCIAL CORPORATION
GM Circle-1
No. 761 Dt. 31/8/17

ಮಾನ್ಯರೆ,

ವಿಷಯ: ಸಣ್ಣ ಮತ್ತು ಅತೀ ಸಣ್ಣ ಉದ್ಯಮಗಳನ್ನು ಸ್ಥಾಪಿಸುವ ಪ.ಜಾ/ಪ.ಪಂ. ದ ಉದ್ಯಮಿಗಳಿಗೆ ಹಣಕಾಸು ಸಂಸ್ಥೆ ವಿಧಿಸುವ ಶುಲ್ಕ ಮರುಪಾವತಿ ಹಾಗೂ ವಿದ್ಯುತ್‌ಚ್ಛಕ್ತಿ ಸಹಾಯಧನ ಬಗ್ಗೆ.

ಉಲ್ಲೇಖ: ಸರ್ಕಾರಿ ಆದೇಶ ಸಂಖ್ಯೆ:ಸಿಐ/48/ಸಿಎಸ್‌ಸಿ/2017, ದಿನಾಂಕ:21–06–2017.

*******

ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಗೆ ಸಂಬಂಧಿಸಿದಂತೆ 2017–18ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ (403)ರಲ್ಲಿ 1) ಮೊದಲ ಬಾರಿಗೆ ಸಣ್ಣ ಮತ್ತು ಅತೀ ಸಣ್ಣ ಉದ್ಯಮಗಳನ್ನು ಸ್ಥಾಪಿಸುವ ಪ.ಜಾ/ ಪ.ಪಂ. ದ ಉದ್ಯಮಿಗಳಿಗೆ ಸಾಲ ಪಡೆಯುವ ಸಂದರ್ಭದಲ್ಲಿ ಹಣಕಾಸು ಸಂಸ್ಥೆಗಳು ವಿಧಿಸುವ ಪರಿಷ್ಕರಣಾ ಶುಲ್ಕ, ಕಾನೂನು ಶುಲ್ಕ, ಏಕಕಾಲಿಕ ಸಾಲ ವಿತರಣಾ ಶುಲ್ಕ ಮತ್ತು ಇತರ ಶುಲ್ಕಗಳನ್ನು ಭರಿಸಲು ಮತ್ತು 2) ಪ.ಜಾ/ಪ.ಪಂ. ದ ಉದ್ಯಮಿಗಳು ಸ್ಥಾಪಿಸುವ ಹೊಸ, ಸಣ್ಣ ಮತ್ತು ಅತೀ ಸಣ್ಣ ಕೈಗಾರಿಕಾ ಘಟಕಗಳಿಗೆ ಮೊದಲ 5 ವರ್ಷಗಳ ಅವಧಿಗೆ ಯೂನಿಟ್‌ಗೆ ರೂ.2/– ಗಳಷ್ಟು ವಿದ್ಯುತ್‌ಚ್ಛಕ್ತಿ ಸಹಾಯಧನವನ್ನು ನೀಡಲು ಘೋಷಿಸಲಾಗಿದೆ.

ಈ ಸಂಬಂಧ ಉಲ್ಲೇಖಿತ ಸರ್ಕಾರದ ಆದೇಶದಲ್ಲಿ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಅಗತ್ಯವಾದ ರೂಪುರೇಷೆಗಳನ್ನು ನೀಡಲಾಗಿದ್ದು, ಸದರಿ ಆದೇಶಗಳ ಪ್ರತಿಗಳನ್ನು ಈ ಪತ್ರದೊಂದಿಗೆ ಅಗತ್ಯ ಮಾಹಿತಿಗಾಗಿ ಲಗತ್ತಿಸಿದೆ. ಈ ಯೋಜನೆಯಡಿ ಬಿಡುಗಡೆಯಾಗುವ ಅನುದಾನವನ್ನು ತಮ್ಮ ಸಂಸ್ಥೆಯಲ್ಲಿ ಕಾಯ್ದಿರಿಸಲು ಯೋಜಿಸಲಾಗಿದ್ದು ಪ್ರತಿ ಪ್ರಕರಣಗಳಿಗೆ ಹಣ ಬಿಡುಗಡೆ ಮಾಡಲು ಈ ಕಛೇರಿಯಿಂದ ಪ್ರಸ್ತಾವನೆಯನ್ನು ಸಂಸ್ಥೆಗೆ ಕಳುಹಿಸಲಾಗುವುದು. ಅದರಂತೆ ಸಂಸ್ಥೆಯಿಂದ ಅನುದಾನವನ್ನು ನಂತರ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲು ಕೋರಲಾಗಿದೆ.

ಅನುದಾನ ಸದುಪಯೋಗಪಡಿಸಿಕೊಂಡು ಈ ಕಾರ್ಯಕ್ರಮವನ್ನು ಯಶಸ್ವಿಯಾಗಿ ಅನುಷ್ಠಾನಕ್ಕೆ ತರಲು ತಮ್ಮ ಸಂಸ್ಥೆಯ ಸಹಕಾರವನ್ನು ಈ ಮೂಲಕ ಕೋರಿದೆ.

ತಮ್ಮ ವಿಶ್ವಾಸಿ,
Darpaiyan

ಆಯುಕ್ತರು, ಕೈಗಾರಿಕಾಭಿವೃದ್ಧಿ ಹಾಗೂ
ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ

D/J/MALA/M.LTR

# ಸರ್ಕಾರದ ಆದೇಶ ಸಂ: ಸಿಐ 48 ಸಿಎಸ್‌ಸಿ 2017, ದಿ: 21.06.2017ರ ಅನುಬಂಧ

ಕಾರ್ಯಕ್ರಮ: ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಸಣ್ಣ ಮತ್ತು ಅತೀ ಸಣ್ಣ ಕೈಗಾರಿಕಾ ಘಟಕಗಳಿಗೆ ವಿದ್ಯುಚ್ಛಕ್ತಿ ಸಹಾಯಧನ.

ಪ್ರಸ್ತಾವನೆ:–

2017–18ನೇ ಸಾಲಿನ ಆಯವ್ಯಯದಲ್ಲಿ ಹೊಸ ಯೋಜನೆಯಡಿಯಲ್ಲಿ ದಿನಾಂಕ:01.04.2017 ರಿಂದ ಹೊಸದಾಗಿ ಸ್ಥಾಪಿಸಿರುವ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಸಣ್ಣ ಮತ್ತು ಅತೀ ಸಣ್ಣ ಕೈಗಾರಿಕಾ ಘಟಕಗಳಿಗೆ ಉತ್ಪಾದನೆ ಪ್ರಾರಂಭಿಸಿದ ದಿನಾಂಕದಿಂದ 5 ವರ್ಷಗಳವರೆಗೆ ಪ್ರತಿ ಯೂನಿಟ್‌ಗೆ ರೂ.2.00 ರಂತೆ ವಿದ್ಯುತ್ ಸಹಾಯಧನ ನೀಡಲಾಗುವುದು.

ವ್ಯಾಖ್ಯಾನ (Definition) :-

1. ಹೊಸ ಘಟಕ ದಿನಾಂಕ:01.04.2017ರ ನಂತರ ಉತ್ಪಾದನೆ ಪ್ರಾರಂಭಿಸುವ ಕೈಗಾರಿಕಾ ಘಟಕಗಳು.
2. ಅತೀ ಸಣ್ಣ ಕೈಗಾರಿಕೆ (Micro):- ಸ್ಥಾವರ ಮತ್ತು ಯಂತ್ರೋಪಕರಣಗಳ ಮೇಲಿನ ಬಂಡವಾಳ ಹೂಡಿಕೆ ಮಿತಿ ರೂ. 25.00 ಲಕ್ಷ.
3. ಸಣ್ಣ ಕೈಗಾರಿಕೆ (Small scale):- ಸ್ಥಾವರ ಮತ್ತು ಯಂತ್ರೋಪಕರಣಗಳ ಮೇಲಿನ ಬಂಡವಾಳ ಹೂಡಿಕೆ ಮಿತಿ ರೂ. 500.00 ಲಕ್ಷ.

ಧ್ಯೇಯ:–

- ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಅಭ್ಯರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಸ್ವಯಂ ಉದ್ಯೋಗ ಕೈಗೊಳ್ಳಲು ಪ್ರೋತ್ಸಾಹಿಸುವುದು.
- ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಮಾಲೀಕತ್ವದ ಕೈಗಾರಿಕೆಗಳು ಉತ್ಪಾದನೆ ವೆಚ್ಚ ಕಡಿಮೆಗೊಳಿಸಿ, ಸ್ಪರ್ಧಾತ್ಮಕ ದರದಲ್ಲಿ ಮಾರಾಟ ಮಾಡಲು ಮತ್ತು ನಿರಂತರವಾಗಿ ಲಾಭದಾಯಕವಾಗಿ ನಡೆಯಲು ಅವಕಾಶ ಕಲ್ಪಿಸುವುದು.

ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರು ವಿದ್ಯುಚ್ಛಕ್ತಿ ಸಹಾಯಧನ ಪಡೆಯಲು ಸಲ್ಲಿಸಬೇಕಾದ ದಾಖಲಾತಿಗಳು:–

1. ಅರ್ಜಿ ನಮೂನೆ – 1.
2. ಭೂಮಿ ಮತ್ತು ಕಟ್ಟಡದ ದಾಖಲಾತಿ.
3. ನೋಂದಾಯಿತ ಪಾಲುದಾರಿಕೆ ಪ್ರಪತ್ರ / ಸಂಘ ಸಂಸ್ಥೆಗೆ ನೋಂದಣಿ/ಮೆಮೊರ್ಯಾಂಡಮ್ ಆಫ್ ಆರ್ಟಿಕಲ್ಸ್.
4. ಧೃಢೀಕೃತ ಜಾತಿ ಪ್ರಮಾಣ ಪತ್ರ.
5. ಉದ್ಯೋಗ ಆಧಾರ ಪ್ರಮಾಣ ಪತ್ರ (U.A.M.) ಮತ್ತು ಪ್ಯಾನ್ ಕಾರ್ಡ್.
6. ವಿದ್ಯುಚ್ಛಕ್ತಿ ಮಂಜೂರಾತಿ ಪತ್ರ (ಘಟಕದ ಮಾಲೀಕರು / ಘಟಕದ ಹೆಸರಿನಲ್ಲಿ ಮಂಜೂರಾತಿ).

7. ವಿದ್ಯುಚ್ಛಕ್ತಿ ಸರ್ವೀಸ್ ಪತ್ರ (ಘಟಕದ ಮಾಲೀಕರು / ಘಟಕದ ಹೆಸರಿನಲ್ಲಿ ಮಂಜೂರಾತಿ).
8. ಮೊದಲನೇ ಮಾರಾಟದ ಬಿಲ್.
9. ಸ್ಥಳೀಯರಿಗೆ ಉದ್ಯೋಗ ನೀಡಿದ ವಿವರ ಅನುಬಂಧ-2 ರಲ್ಲಿ.
10. ಬ್ಯಾಂಕ್ ಖಾತೆಯ ವಿವರ ಅನುಬಂಧ-3 ರಲ್ಲಿ.
11. ವಿದ್ಯುಚ್ಛಕ್ತಿ ಬಿಲ್ ಮತ್ತು ಪಾವತಿ ರಶೀದಿಗಳು.
12. ಉತ್ಪಾದನಾ ವಿವರ (ಪರಿಮಾಣ ಮತ್ತು ಮೊಬಲಗು)

**ಜಿಲ್ಲಾ ಮಟ್ಟದ ಸಮಿತಿ ಸಭೆ (D.L.C):-**

ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಇವರ ಅಧ್ಯಕ್ಷತೆಯಲ್ಲಿ ರಚಿಸಿರುವ ಜಿಲ್ಲಾ ಮಟ್ಟದ ಪ್ರೋತ್ಸಾಹ ಮತ್ತು ರಿಯಾಯಿತಿ ಮಂಜೂರಾತಿ ಸಮಿತಿ ಸಭೆಯಲ್ಲಿ ವಿದ್ಯುಚ್ಛಕ್ತಿ ಸಹಾಯಧನ ಅರ್ಜಿಗಳನ್ನು ಪರಿಶೀಲಿಸಿ ಮಂಜೂರು ಮಾಡುವುದು.

**ಸಣ್ಣ ಮತ್ತು ಅತೀ ಸಣ್ಣ ಕೈಗಾರಿಕೆಗಳಿಗೆ ವಿದ್ಯುಚ್ಛಕ್ತಿ ಸಹಾಯಧನ ಮಂಜೂರು ಮಾಡಲು ಕೈಗಾರಿಕೆಗಳಿಗೆ ಇರುವ ಅರ್ಹತೆ ಮತ್ತು ಮಾನದಂಡಗಳು:-**

1. ಕೈಗಾರಿಕ ಘಟಕದ ಮಾಲೀಕತ್ವ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ವರ್ಗದವರು ಒಡೆತನದಲ್ಲಿ ಇರಬೇಕು ಹಾಗೂ ಯಾವುದೇ ಕಾರಣಕ್ಕೂ ಘಟಕವನ್ನು ಬಾಡಿಗೆ ಅಥವಾ ಲೀಸ್‌ಗೆ ನೀಡಿರಬಾರದು.
2. ವಿದ್ಯುಚ್ಛಕ್ತಿ ಸಹಾಯಧನವನ್ನು 2014-19ನೇ ಸಾಲಿಗೆ ಕೈಗಾರಿಕಾ ನೀತಿಯಂತೆ ಅರ್ಹತೆಯಿರುವ ಎಲ್ಲಾ ಸಣ್ಣ ಮತ್ತು ಅತೀ ಸಣ್ಣ ಕೈಗಾರಿಕೆಗಳಿಗೆ ನೀಡಲಾಗುವುದು.
3. ವಿದ್ಯುಚ್ಛಕ್ತಿ ಸಹಾಯಧನವನ್ನು ಹೊಸದಾಗಿ ಸ್ಥಾಪಿತವಾದ ಅಂದರೆ ಸಣ್ಣ ಮತ್ತು ಅತೀ ಸಣ್ಣ ಕೈಗಾರಿಕೆಗಳು ಉತ್ಪಾದನೆಯನ್ನು ದಿನಾಂಕ:01.04.2017ರ ನಂತರ ಪ್ರಾರಂಭಿಸಿರಬೇಕು ಅಥವಾ ವಿದ್ಯುಚ್ಛಕ್ತಿ ಪವರ್ ಸರ್ವೀಸ್‌ನ್ನು ದಿನಾಂಕ:01.04.2017ರ ನಂತರ ಪಡೆದ ಕೈಗಾರಿಕಾ ಘಟಕಗಳಿಗೆ ಮಾತ್ರ ಅನ್ವಯಿಸುತ್ತದೆ.
4. ವಿದ್ಯುಚ್ಛಕ್ತಿ ಸಹಾಯಧನವನ್ನು ದಿನಾಂಕ:01.04.2017ರ ನಂತರ ಪ್ರತಿ ತ್ರೈಮಾಸಿಕಕ್ಕೆ ಸಹಾಯಧನ ಮಂಜೂರು ಮಾಡಿ ಅನುದಾನ ಲಭ್ಯತೆ ಆಧರಿಸಿ ಜೇಷ್ಠತೆಯನುಸಾರ ಬಿಡುಗಡೆ ಮಾಡಲಾಗುವುದು.
5. ವಿದ್ಯುಚ್ಛಕ್ತಿ ಸಹಾಯಧನವನ್ನು ಪಡೆಯಲು ಕೈಗಾರಿಕಾ ಘಟಕದ ಎಲ್ಲಾ ಪಾಲುದಾರರು / ಸದಸ್ಯರು / ಟ್ರಸ್ಟೀಗಳು / ಡೈರೆಕ್ಟರ್‌ಗಳು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿರಬೇಕು.
6. ಸಿ.ಎಂ.ಇ.ಜಿ.ಪಿ. ಮತ್ತು ಪಿ.ಎಂ.ಇ.ಜಿ.ಪಿ. ಯೋಜನೆಯಡಿ ಸ್ಥಾಪಿಸಿರುವ ಕೈಗಾರಿಕಾ ಘಟಕಗಳು ಸಹ ಅರ್ಹವಾಗಿರುತ್ತವೆ.
7. ಸುವರ್ಣ ವಸ್ತ್ರ ನೀತಿ ಮತ್ತು ಹೊಸ ಜವಳಿ ನೀತಿಯಡಿಯಲ್ಲಿ ಪ್ರೋತ್ಸಾಹ ಪಡೆದ ಕೈಗಾರಿಕಾ ಘಟಕಗಳು ಅನರ್ಹವಾಗಿರುತ್ತವೆ.
8. ವಿಸ್ತರಣೆ, ಆಧುನೀಕರಣ ಮತ್ತು ಉತ್ಪನ್ನ ಬದಲಾವಣೆ ಕೈಗೊಂಡ ಕೈಗಾರಿಕಾ ಘಟಕಗಳು ಅನರ್ಹವಾಗಿರುತ್ತವೆ.

21/06

[ಬಿ.ವಿ. ಮಹೇಂದ್ರ]
ಸರ್ಕಾರದ ಅಧೀನ ಕಾರ್ಯದರ್ಶಿ [ಸಪ್ರಕೈ],
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

## ಸರ್ಕಾರದ ಆದೇಶ ಸಂ: ಸಿಐ 48 ಸಿಎಸ್‌ಸಿ 2017, ದಿ: 21.06.2017ರ ಅನುಬಂಧ

ಕಾರ್ಯಕ್ರಮ: ಮೊದಲ ಬಾರಿಗೆ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಉದ್ದಿಮೆದಾರರು ಸಾಲ ಪಡೆಯುವ ಸಂದರ್ಭದಲ್ಲಿ ಹಣಕಾಸು ಸಂಸ್ಥೆಗಳು ವಿಧಿಸುವ ಶುಲ್ಕಗಳ ಮರುಪಾವತಿ.

ಪ್ರಸ್ತಾವನೆ:

2017–18ನೇ ಸಾಲಿನ ಆಯವ್ಯಯದಲ್ಲಿ ಹೊಸ ಯೋಜನೆಯಡಿಯಲ್ಲಿ ದಿ: 01.04.2017ರಿಂದ ಮೊದಲ ಬಾರಿಗೆ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಉದ್ಯಮಿಗಳು ಸ್ಥಾಪಿಸುವ ಸಣ್ಣ & ಅತೀ ಸಣ್ಣ ಕೈಗಾರಿಕಾ ಘಟಕಗಳು ಸಾಲ ಪಡೆಯುವ ಸಂದರ್ಭದಲ್ಲಿ ಕೆ.ಎಸ್.ಎಫ್.ಸಿ. ಮತ್ತು ಇತರೇ ಹಣಕಾಸು ಸಂಸ್ಥೆಗಳು ವಿಧಿಸುವ ಪರಿಷ್ಕರಣಾ ಶುಲ್ಕ, ಕಾನೂನು ಶುಲ್ಕ, ಏಕಕಾಲಿಕ ಸಾಲ ವಿವರಣಾ ಶುಲ್ಕ ಮತ್ತು ಇತರೆ ಶುಲ್ಕಗಳನ್ನು ಸರ್ಕಾರದಿಂದ ಭರಿಸಲಾಗುವುದು.

ವ್ಯಾಖ್ಯಾನ **(Definition)**:-

1. ಹೊಸ ಘಟಕ ದಿ: 01.04.2017ರ ನಂತರ ಮೊದಲ ಸಲ ಕೆ.ಎಸ್.ಎಫ್.ಸಿ. ಮತ್ತು ಹಣಕಾಸು ಸಂಸ್ಥೆಗಳು ಸಾಲಕ್ಕೆ ಅರ್ಜಿ ಸಲ್ಲಿಸುವ ಉದ್ದಿಮೆದಾರರು.
2. ಅತೀ ಸಣ್ಣ ಕೈಗಾರಿಕೆ (Micro): ಸ್ಥಾವರ ಮತ್ತು ಯಂತ್ರೋಪಕರಣಗಳ ಮೇಲೆ ಬಂಡವಾಳ ಹೂಡಿಕೆ ಮಿತಿ ರೂ. 25.00 ಲಕ್ಷ
3. ಸಣ್ಣ ಕೈಗಾರಿಕೆ (Small): ಸ್ಥಾವರ ಮತ್ತು ಯಂತ್ರೋಪಕರಣಗಳ ಮೇಲೆ ಬಂಡವಾಳ ಹೂಡಿಕೆ ಮಿತಿ ರೂ. 500.00 ಲಕ್ಷ.

ಧ್ಯೇಯ:

- ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಅಭ್ಯರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಸ್ವ–ಉದ್ಯೋಗ ಕೈಗೊಳ್ಳಲು ಪ್ರೋತ್ಸಾಹಿಸುವುದು.
- ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಅಭ್ಯರ್ಥಿಗಳು ಸಾಲ ಪಡೆಯುವ ಸಂದರ್ಭದಲ್ಲಿ ಪ್ರಾರಂಭಿಕ ಆರ್ಥಿಕ ಹೊರೆಯನ್ನು ತಗ್ಗಿಸುವುದು.
- ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಉದ್ಯಮಿಗಳು ಉದ್ದಿಮೆಗಳಿಗೆ ಹಣಕಾಸು ಸಂಸ್ಥೆಗಳಿಂದ ತ್ವರಿತವಾಗಿ ಸಾಲ ಮಂಜೂರು ಮಾಡಲು ಅನುಕೂಲ ಕಲ್ಪಿಸುವುದು.
- ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಉದ್ದಿಮೆಗಳು ಹೆಚ್ಚು–ಹೆಚ್ಚು ಉದ್ಯೋಗಗಳನ್ನು ಕಲ್ಪಿಸುವುದು.

ಪರಿಷ್ಕರಣಾ ಶುಲ್ಕ ಭರಿಸುವ ನೀತಿ:-

ದಿನಾಂಕ: 01.04.2017ರ ನಂತರ ಪ್ರತಿ ತ್ರೈಮಾಸಿಕದಲ್ಲಿ ಕೆ.ಎಸ್.ಎಫ್.ಸಿ. ಮತ್ತು ಇತರೇ ಹಣಕಾಸು ಸಂಸ್ಥೆಗಳಿಂದ ಮೊದಲ ಬಾರಿ ಸಾಲ ಮಂಜೂರಾತಿ ಪಡೆದ ಉದ್ದಿಮೆಗಳ ಬಗ್ಗೆ ಹಾಗೂ ವಿವಿಧ ಶುಲ್ಕಗಳನ್ನು ಮನ್ನಾ ಮಾಡಿದ ಬಗ್ಗೆ ಆಯುಕ್ತರು, ಕೈಗಾರಿಕಾಭಿವೃದ್ಧಿ, ಇವರು ಮಾಹಿತಿ ಪಡೆದು ಆಯವ್ಯಯದಲ್ಲಿ ಲಭ್ಯವಿರುವ ಅನುದಾನವನ್ನು ಜೇಷ್ಠತೆಯ ಆಧಾರದ ಮೇಲೆ ಸಂಬಂಧಪಟ್ಟ ಹಣಕಾಸು ಸಂಸ್ಥೆಗಳಿಗೆ ಬಿಡುಗಡೆ ಮಾಡುವುದು. ಕೆ.ಎಸ್.ಎಫ್.ಸಿ. ಮುಂಗಡವಾಗಿ ಅನುದಾನ ಬಿಡುಗಡೆ ಮಾಡಲು ಸಹ ಅವಕಾಶ ಕಲ್ಪಿಸುವುದು.

21/06

[ಬಿ.ವಿ. ಮಹೇಂದ್ರ]
ಸರ್ಕಾರದ ಅಧೀನ ಕಾರ್ಯದರ್ಶಿ [ಸಪ್ರಕೈ].
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.